(ಇಂದು ದಿನಾಂಕ:05-01-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ವಾದಿಯರ ಪರ ಶ್ರೀ ಎಸ್ ಎಸ್ ಕೆ ವಕೀಲರಿಂದ:**

1. ನಾನು ದ್ವಿತೀಯ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ವಾದಿಯರ ಮತ್ತು ದಾವಾ ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಮತ್ತು ನೆನಪು ಇದೆ. ದಾವಾ ಆಸ್ತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. 2007-08 ನೇ ಸಾಲಿನಲ್ಲಿ ವಾದಿಯರ ಮದುವೆ ಆಯಿತು. ನಾನು ಮದುವೆಗೆ ಹಾಜರಾಗಿದ್ದೆ. ನಾನು 6 ಮತ್ತು 7 ನೇ ವಾದಿಯರ ಮದುವೆ ಆಮಂತ್ರಣ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ದಾವೆಯನ್ನು ಯಾರು ಯಾರ ವಿರುದ್ದ ಸಲ್ಲಿಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ಮತ್ತು ನನ್ನ ಅತ್ತಿಗೆ ರವರ ವಿರುದ್ದ ಮಾತ್ರ ದಾವೆ ಸಲ್ಲಿಸಿದ್ದರೆ ಸಾಕಿತ್ತು. ಉಳಿದವರ ವಿರುದ್ದ ದಾವೆ ಸಲ್ಲಿಸುವ ಅವಶ್ಯಕತೆ ಇರಲಿಲ್ಲ.

2. 1 ನೇ ಪ್ರತಿವಾದಿಯರ ಅಣ್ಣ ತಮ್ಮಂದಿರ ಮಧ್ಯೆ 2004 ಅಥವಾ 2005 ರಲ್ಲಿ ಪಾಲುವಿಭಾಗ ಆಗಿರುತ್ತದೆ. ಸದರಿ ಪಾಲುವಿಭಾಗದಲ್ಲಿ ನಾನು ಹಾಜರ ಇರಲಿಲ್ಲ. 1 ನೇ ಪ್ರತಿವಾದಿಯರ ಅಣ್ಣ ತಮ್ಮಂದಿರ ಮಧ್ಯೆ 2004 ಅಥವಾ 2005 ರಲ್ಲಿ ಪಾಲುವಿಭಾಗ ಆಗಿರುತ್ತದೆ ಅಂತಾ ನಾನು 2 ವರ್ಷಗಳ ಹಿಂದೆ ಗಣಕಯಂತ್ರದಲ್ಲಿ ಪರೀಶೀಲನೆ ಮಾಡಿದಾಗ ನನಗೆ ಗೊತ್ತಾಯಿತು. 1 ನೇ ಪ್ರತಿವಾದಿಯರ ಅಣ್ಣ ತಮ್ಮಂದಿರ ಮಧ್ಯೆ 2004 ಅಥವಾ 2005 ರಲ್ಲಿ ಪಾಲುವಿಭಾಗ ಆಗಿರುತ್ತದೆ ಅನ್ನುವ ಬಗ್ಗೆ ನಾನು ನನ್ನ ಪ್ರತಿವಾದ ಪತ್ರದಲ್ಲಿ ಆಗಲಿ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೇನೋ ಇಲ್ಲವೋ ಎನ್ನುವ ಬಗ್ಗೆ ನನಗೆ ನೆನಪಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಅಂಶಗಳ ಬಗ್ಗೆ ನನಗೆ ಸ್ವಲ್ಪ ನೆನಪು ಇದೆ ಮತ್ತು ಸ್ವಲ್ಪ ಮಾಹಿತಿ ಇದೆ.

3. ನನ್ನ ತಂದೆಯವರು ಜಮೀನು ಖರೀದಿ ಮಾಡಿದ್ದಾರೆ ಎಂದು ಹೇಳುವ ಸಂದರ್ಭದಲ್ಲಿ ನಾನು ಹಾಜರ ಇರಲಿಲ್ಲ. ಆದರೆ ಕರಾರು ಪತ್ರ ಬರೆಯುವ ಸಂದರ್ಭದಲ್ಲಿ ನಾನು ಹಾಜರಿದ್ದೆ. ಖರೀದಿ ಕರಾರು ಪತ್ರ ಬರೆದ 3-4 ತಿಂಗಳ ನಂತರ ಖರೀದಿ ಪತ್ರ ನೊಂದಣಿ ಆಯಿತು.

4. ಖರೀದಿ ಕರಾರು ಪತ್ರ ಬರೆಯುವ ದಿನದಂದು ನಾನು ಎಷ್ಟು ಮುಂಗಡ ಹಣ ಪಾವತಿ ಮಾಡಿದ್ದೇನೆ ನನಗೆ ಗೊತ್ತಿಲ್ಲ, ಏಕೆಂದರೆ ನನ್ನ ತಂದೆಯವರು ಜಮೀನನ್ನು ಖರೀದಿ ಮಾಡಿದ್ದಾರೆ. ಖರೀದಿ ಕರಾರು ಪತ್ರಗಳನ್ನು ಯಾವ ಯಾವ ದಿನಾಂಕಗಳಂದು ನೊಂದಣಿ ಮಾಡಲಾಗಿದೆ ಎಂದರೆ 2007 ಅಥವಾ 2008 ನೇ ಸಾಲಿನಲ್ಲಿ ಹಾಗೂ 2010 ರಲ್ಲಿ ನೊಂದಣಿ ಮಾಡಲಾಗಿದೆ. ಸದರಿ ಖರೀದಿ ಕರಾರು ಪತ್ರಗಳನ್ನು ನೊಂದಣಿ ಮಾಡಿಸಲು ಎಷ್ಟು ಖರ್ಚು ಆಯಿತು ಎಂದು ನನಗೆ ತಂದೆಯವರಿಗೆ ಮಾಹಿತಿ ಇದೆ ನನಗೆ ಮಾಹಿತಿ ಇಲ್ಲ. ನನ್ನ ತಂದೆಯವರು 2014 ರಲ್ಲಿ ಮರಣ ಹೊಂದಿರುತ್ತಾರೆ. ಸದರಿ ಮೂಲ ನೊಂದಣಿ ಖರೀದಿ ಕರಾರು ಪತ್ರಗಳನ್ನು ನಾನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ನನ್ನ 25 ವರ್ಷಗಳಲ್ಲಿ ನನಗೆ ಲೋಕಜ್ಞಾನ ಬಂತು. 2007 ರಲ್ಲಿ ನನ್ನ ವಯಸ್ಸು 30 ವರ್ಷ ಇತ್ತು.

5. ಸದರಿ ನೊಂದಣಿ ಖರೀದಿ ಕರಾರು ಪತ್ರಗಳಲ್ಲಿ ಯಾರು ಯಾರು ಸಾಕ್ಷಿ ಸಹಿ ಮಾಡಿರುತ್ತಾರೆ ಮತ್ತು ಯಾರು ಬರೆದಿರುತ್ತಾರೆ ನನಗೆ ಗೊತ್ತಿರುತ್ತದೆ. ಪ್ರಸ್ತುತ ಪ್ರಕರಣದ ಸಾಕ್ಷಿ ನುಡಿಯುವ ಪೂರ್ವದಲ್ಲಿ ನಾನು ಸದರಿ ನೊಂದಣಿ ಖರೀದಿ ಕರಾರು ಪತ್ರಗಳಲ್ಲಿನ ಅಂಶಗಳನ್ನು ನಾನು ಓದಿದ್ದೇನೆ ಆದರೆ ನೆನಪಿಲ್ಲ. ಮೊದಲನೇ ನೊಂದಣಿ ಖರೀದಿ ಕರಾರು ಪತ್ರದಲ್ಲಿ ಎಷ್ಟು ಹಣವನ್ನು ನಮೂದು ಮಾಡಲಾಗಿದೆ ನನಗೆ ಗೊತ್ತಿಲ್ಲ. ಅದು ನಮ್ಮ ತಂದೆಯವರಿಗೆ ಗೊತ್ತು. 2014 ರಿಂದ ಇಲ್ಲಿಯವರೆಗೆ ನನ್ನ ತಂದೆಯ ಮರಣದ

ನಂತರ ಮನೆಯ ಯಜಮಾನಿಕೆ ನಾನು ಮಾಡುತ್ತೇನೆ. ಎರಡನೇಯ ನೊಂದಣಿ ಖರೀದಿ ಕರಾರು ಪತ್ರದಲ್ಲಿ ಎಷ್ಟು ಹಣವನ್ನು ನಮೂದು ಮಾಡಲಾಗಿದೆ ನನಗೆ ಗೊತ್ತಿಲ್ಲ. ಅದು ನಮ್ಮ ತಂದೆಯವರಿಗೆ ಗೊತ್ತು. ಪ್ರಸ್ತುತ ಪ್ರಕರಣದ ಇಂದು ಸಾಕ್ಷಿ ನುಡಿಯುವ ಪೂರ್ವದಲ್ಲಿ ನಾನು ಎರಡು ನೊಂದಣಿ ಖರೀದಿ ಕರಾರು ಪತ್ರಗಳಲ್ಲಿನ ಅಂಶಗಳನ್ನು ನಾನು ಪರೀಶೀಲನೆ ಮಾಡಿದ್ದೇನೆ. ಎರಡು ನೊಂದಣಿ ಖರೀದಿ ಕರಾರು ಪತ್ರಗಳಲ್ಲಿ ಎಷ್ಟು ಹಣವನ್ನು ನಮೂದು ಮಾಡಲಾಗಿದೆ ನನಗೆ ನೆನಪಿಲ್ಲ.

6. ಮೊದಲನೇ ನೊಂದಣಿ ಖರೀದಿ ಕರಾರು ಪತ್ರವನ್ನು ನನ್ನ ಮನೆಯಲ್ಲಿ ವಿರುಪನಗೌಡ ತಂದೆ ವಿರುಪನಗೌಡ, ವೀರಭದ್ರಯ್ಯ ರವರ ಸಮಕ್ಷಮ ಬರೆಯಲಾಗಿದೆ. ಎರಡು ನೊಂದಣಿ ಖರೀದಿ ಕರಾರು ಪತ್ರಗಳ ಬಗ್ಗೆ ನನ್ನ ತಂದೆಯವರು ನನಗೆ ಖರೀದಿ ಮಾಡಿದ ತಕ್ಷಣ ನನಗೆ ಮಾಹಿತಿ ಕೊಟ್ಟಿರುತ್ತಾರೆ. ನನ್ನ ತಂದೆಯವರು ಎಷ್ಟು ರೂಪಾಯಿಗಳಿಗೆ ಖರೀದಿ ಮಾಡಿದ್ದೇನೆ ಅಂತಾ ಮಾಹಿತಿ ಕೊಟ್ಟ ಬಗ್ಗೆ ನನಗೆ ನೆನಪಿಲ್ಲ. ನನ್ನ ಪ್ರತಿವಾದ ಪತ್ರ ತಯಾರಿಸಲು ನಮ್ಮ ವಕೀಲರಿಗೆ ವಿರುಪನಗೌಡರು ಮಾಹಿತಿ ಕೊಟ್ಟಿರುತ್ತಾರೆ. 1 ನೇ ಪ್ರತಿವಾದಿಯರ ಅಣ್ಣ ತಮ್ಮಂದಿರ ಮಧ್ಯೆ 2004 ಅಥವಾ 2005 ರಲ್ಲಿ ಪಾಲುವಿಭಾಗ ಆಗುವ ವೇಳೆಯಲ್ಲಿ ಯಾರು ಯಾರಿಗೆ ಯಾವ ಯಾವ ಆಸ್ತಿ ಬಂದಿದೆ ಎಂದು ನನಗೆ ಮಾಹಿತಿ ಇಲ್ಲ. ನಾನು ಖರೀದಿ ಮಾಡಿದ್ದೇನೆ ಎಂದು ಹೇಳಲಾದ ಆಸ್ತಿಗಳು ವಾದಿಯರ ಮತ್ತು 1 ನೇ ಪ್ರತಿವಾದಿಯ ಜಂಟಿ ಕುಟುಂಬದ ಆಸ್ತಿಗಳು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ನನ್ನ ತಂದೆಯವರಿಗೆ ಗೊತ್ತು ಎಂದು ನುಡಿಯುತ್ತಾರೆ.

7. ನನ್ನ ತಂದೆಯವರು ಆಸ್ತಿಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ಯಾವ ಯಾವ ದಾಖಲೆಗಳನ್ನು ಪರೀಶೀಲನೆ ಮಾಡಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ಖರೀದಿ ಕರಾರು ಪತ್ರ ಮತ್ತು ಖರೀದಿ ಪತ್ರ ನೊಂದಣಿ ಮಾಡುವ ಸಂದರ್ಭದಲ್ಲಿ ವಾದಿಯರ ಸಹಿ ಪಡೆಯಬೇಕು ಅಂತಾ ನಾನು ನನ್ನ ತಂದೆಗೆ ಹೇಳಿಲ್ಲ. 1 ನೇ ಪ್ರತಿವಾದಿ ವಾದಿಯರಿಗೆ ದಾವಾ ಹಾಕುವ ಪೂರ್ವದಲ್ಲಿ 1 ವರ್ಷಕ್ಕೆ ಎಷ್ಟು ಕಾಳು ಕಡಿಗಳನ್ನು ಕೊಡುತ್ತಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನೊಂದಣಿ ಖರೀದಿ ಕರಾರು ಪತ್ರ ನನ್ನ ಸಮಕ್ಷಮ ಆಗಿರುವುದಿಲ್ಲ, ನನ್ನ ತಂದೆಯವರ ಸಮಕ್ಷಮ ಆಗಿರುತ್ತದೆ. ಆ ದಿವಸ ಹಣದ ವ್ಯವಹಾರ ಏನೇನು ಆಯಿತು ಎಂದು ನನಗೆ ಗೊತ್ತಿಲ್ಲ ನನ್ನ ತಂದೆಯವರಿಗೆ ಗೊತ್ತು.

8. ನಾನು ಹಾಗೂ ನನ್ನ ತಂದೆಯವರು ದಾವಾ ಆಸ್ತಿಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ವಾದಿಯರಿಗೆ ಭೇಟಿಯಾಗಿ ನಾವು ಆಸ್ತಿಗಳನ್ನು ಖರೀದಿಸಲು ಇಚ್ಚಿಸಿದ್ದೇವೆ ಅಂತಾ ಅವರ ಜೊತೆ ಚರ್ಚೆ ಮಾಡಿದ್ದೇವೆ.

ನೊಂದಣಿ ಖರೀದಿ ಪತ್ರ ಆಗುವ 1 ತಿಂಗಳ ಮುಂಚೆ ವಾದಿಯರಿಗೆ ಭೇಟಿಯಾಗಿ ನಾವು ಆಸ್ತಿಗಳನ್ನು ಖರೀದಿಸಲು ಇಚ್ಚಿಸಿದ್ದೇವೆ ಅಂತಾ ಅವರ ಜೊತೆ ಚರ್ಚೆ ಮಾಡಿದ್ದೇವೆ. ನಾನು ವಾದಿಯರಿಗೆ ಭೇಟಿಯಾಗಿ ನಿಮ್ಮ ತಂದೆಯವರು ಜಮೀನು ಮಾರಾಟ ಮಾಡಿದ್ದಾರೆ ನಿಮ್ಮ ಸಹಿ ಬೇಕು ಅಂತಾ ನಾನು ಅವರಿಗೆ ಕೇಳಿಲ್ಲ. ನಾನು ಹಾಗೂ ನನ್ನ ತಂದೆಯವರು ದಾವಾ ಆಸ್ತಿಗಳನ್ನು ಖರೀದಿ ಮಾಡುವ ಪೂರ್ವದಲ್ಲಿ ವಾದಿಯರಿಗೆ ಭೇಟಿಯಾಗಿ ನಾವು ಆಸ್ತಿಗಳನ್ನು ಖರೀದಿಸಲು ಇಚ್ಚಿಸಿದ್ದೇವೆ ಅಂತಾ ಅವರ ಜೊತೆ ಚರ್ಚೆ ಮಾಡಿದ್ದೇವೆ ಅಂತಾ ನನ್ನ ಪ್ರತಿವಾದಪತ್ರದಲ್ಲಾಗಲೀ ಅಥವಾ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ್ದೀರಾ ಅಂತಾ ಸೂಚಿಸಿದಾಗ, ಕರಾರು ಪತ್ರದಲ್ಲಿ ಬರೆಸಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ.

9. ಎರಡು ಮೂಲ ನೊಂದಣಿ ಕರಾರು ಪತ್ರಗಳು ನನ್ನ ಬಳಿ ಇವೆ. ನಮ್ಮ ತಂದೆಗೆ ನಾವು ಎರಡು ಗಂಡು ಮತ್ತು ಎರಡು ಹೆಣ್ಣು ಮಕ್ಕಳು ಇರುತ್ತೇವೆ. ನಾವೆಲ್ಲರೂ ಒಳ್ಳೆಯ ಸಂಬಂಧ ಹೊಂದಿರುತ್ತೇವೆ. ನಮ್ಮ ಅಣ್ಣ ಮತ್ತು ಅಕ್ಕ ತಂಗಿಯರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ನಾನು ಅಣ್ಣ ತಮ್ಮಂದಿರು ಮತ್ತು ಅಕ್ಕ ತಂಗಿಯರು ಚರ್ಚಿಸಿ ಸಮ್ಮತಿಯ ಮೇರೆಗೆ ನ್ಯಾಯಾಲಯದ ಒಂದು ಡಿಕ್ರಿಯನ್ನು ಪಡೆದುಕೊಳ್ಳೋಣ ಅಂತಾ ನಿರ್ಧರಿಸಿ ನಾವೆಲ್ಲರೂ ಸೇರಿ ಡಿಕ್ರಿ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ರೀತಿ ಅಸಲು ದಾವಾ ಸಂಖ್ಯೆ 482/2014 ದಾವೆ ಸಲ್ಲಿಸಲು ವ್ಯಾಜ್ಯ ಕಾರಣವುಂಟಾಗಿರಲಿಲ್ಲ ಎಂದರೆ ಸರಿ. ಎಲ್ಲ ವಾದಿಯರ ಕಾನೂನು ಸಮ್ಮತಿ ಪಡೆಯುವುದು ನಮ್ಮ ಕರ್ತವ್ಯ ಆಗಿತ್ತು ಎಂದರೆ ಸರಿ. ಒಂದು ವೇಳೆ ನಾನು ಮತ್ತು ನನ್ನ ತಂದೆಯವರು ವಾದಿಯರಿಗೆ ಭೇಟಿಯಾಗಿ ಸಮ್ಮತಿ ಸಾಕ್ಷಿ ಸಹಿ ಮಾಡಲು ಹೇಳಿದ್ದೆ ಆದಲ್ಲಿ ಅವರಿಗೆ ಒಪ್ಪಿಗೆ ಇದ್ದಲ್ಲಿ ಸಮ್ಮತಿ ಸಾಕ್ಷಿ ಸಹಿ ಮಾಡುತ್ತಿದ್ದರು, ಒಪ್ಪಿಗೆ ಇಲ್ಲದಿದ್ದಲ್ಲಿ ಮಾಡುತ್ತಿರಲಿಲ್ಲ ಎಂದರೆ ಸರಿ.

10. 1 ನೇ ಪ್ರತಿವಾದಿಯ ಚಟಗಳ ಬಗ್ಗೆ ನನ್ನ ತಂದೆಯವರಿಗೆ ಮಾಹಿತಿ ಇದ್ದಷ್ಟು ನನಗೆ ಮಾಹಿತಿ ಇಲ್ಲ ಎಂದರೆ ಸರಿ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಅವರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲಿಗಾಗಿ ಮುಂದಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು